
# ಫೋನ್‌ಟೋಗ್ರಫಿ!

ಇದು ಛಾಯಾಗ್ರಹಣದ ಜನಪ್ರಿಯ ಆಯಾಮ. ಈಗ ಮೊಬೈಲ್ ಇರುವ ಎಲ್ಲರೂ ಛಾಯಾಗ್ರಾಹಕರೇ!

■ ಚಿತ್ರ– ಲೇಖನ:
**ಹರೀಶ್ ಹಳೆಮನೆ**










ಎಲ್ಲರ ಕೈಯಲ್ಲೂ ಕ್ಯಾಮೆರಾ..! ಇದೀಗ ಸಾಧ್ಯವಾಗಿದೆ. ಸ್ಮಾರ್ಟ್‌ಫೋನ್ ಕಂಪೆನಿಗಳ ಮಧ್ಯೆ 'ಮೆಗಾಪಿಕ್ಸೆಲ್' ಸಮರ ಶುರುವಾದ್ದರಿಂದ ಉತ್ತಮ ಕ್ಯಾಮೆರಾ ಯಾವುದು ಎನ್ನುವ ಬದಲು ಉತ್ತಮ ಕ್ಯಾಮೆರಾ ಫೋನ್ ಯಾವುದು... ಎಂಬ ಪ್ರಶ್ನೆಯನ್ನು ಎಲ್ಲರೂ ಕೇಳತೊಡಗಿದ್ದಾರೆ.

ಸ್ಮಾರ್ಟ್‌ಫೋನ್‌ಗಳು ಮಾರುಕಟ್ಟೆಗೆ ಬರುವುದಕ್ಕೂ ಮೊದಲು ಮೊಬೈಲ್ ಕ್ಯಾಮೆರಾಗಳು ಇದ್ದವಾದರೂ ಗುಣಮಟ್ಟ ಅಷ್ಟೇನೂ ಚೆನ್ನಾಗಿರಲಿಲ್ಲ. ಗುಣಮಟ್ಟ ಚೆನ್ನಾಗಿಲ್ಲದ ಕಾರಣ ಅವುಗಳನ್ನು ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಚಿತ್ರವೊಂದರ ಗುಣಮಟ್ಟವನ್ನು ನಿರ್ಧರಿಸುವಲ್ಲಿ ಕೇವಲ ಮೆಗಾಪಿಕ್ಸೆಲ್ ಮಾತ್ರವಲ್ಲ, ಸೆನ್ಸರ್‌ಗಳು ಹಾಗೂ ಪ್ರಾಸೆಸರ್‌ಗಳೂ ಪ್ರಮುಖ ಪಾತ್ರ ವಹಿಸುತ್ತವೆ ಎನ್ನುವುದನ್ನು ಮರೆಯಬಾರದು. ಹೀಗಾಗಿ ಮೊದಲ ಜನರೇಷನ್ ಮೊಬೈಲ್ ಕ್ಯಾಮೆರಾಗಳ ಗುಣಮಟ್ಟ ನಿರೀಕ್ಷಿತ ಮಟ್ಟವನ್ನು ತಲುಪಿರಲಿಲ್ಲ.

'ಸೆಲ್ಫೀ' ಅಥವಾ 'ಸ್ವಂತೀ' ಚಿತ್ರಗಳಿಗಾಗಿ ಸ್ಮಾರ್ಟ್‌ಫೋನ್ ಬಳಕೆ ಅತಿಯಾಗಿ ಹೆಚ್ಚಳವಾಗತೊಡಗಿತು. ಈ ಸೆಲ್ಫೀ ಹುಚ್ಚು ಎಲ್ಲಿಯವರೆಗೆ ಬಂತೆಂದರೆ ಮೊಬೈಲ್ ತಯಾರಕರು ಸೆಲ್ಫೀ ಚಿತ್ರಗಳನ್ನು ತೆಗೆಯಲೆಂದೇ ಮೊಬೈಲ್ ಮಾದರಿಗಳನ್ನು ಬಿಡುಗಡೆ ಮಾಡತೊಡಗಿದರು. ಕ್ಯಾಮೆರಾಗಳಲ್ಲೂ ಸೆಲ್ಫೀ ತೆಗೆಯುವ ಮಾದರಿಗಳು ಒಂದು ಮಟ್ಟಿಗೆ ಜನಪ್ರಿಯವಾದವು.

ಸ್ಮಾರ್ಟ್‌ಫೋನ್ ಕ್ಯಾಮೆರಾಗಳು ಇತರ ಕಾಂಪ್ಯಾಕ್ಟ್ ಕ್ಯಾಮೆರಾಗಳನ್ನು ಮೀರಿಸಿದ್ದೇ ಅಲ್ಲಿ. ಚಿತ್ರ ತೆಗೆದೊಡನೆ ಫೇಸ್‌ಬುಕ್, ಇನ್ಸ್ಟಾಗ್ರಾಮ್ ಮುಂತಾದ ಸಾಮಾಜಿಕ ತಾಣಗಳಲ್ಲಿ ಹಂಚಿಕೊಳ್ಳಲು ಸಾಧ್ಯವಾದದ್ದೇ ಸ್ಮಾರ್ಟ್‌ಫೋನ್ ಕ್ಯಾಮೆರಾಗಳ ಹೆಚ್ಚುಗಾರಿಕೆ. ಫೇಸ್‌ಬುಕ್‌ನಲ್ಲಿ ನಮ್ಮ ಸ್ನೇಹಿತರಷ್ಟೇ 'ಲೈಕ್' ಒತ್ತಿದರೆ 'ಇನ್ಸ್ಟಾಗ್ರಾಮ್'ನಲ್ಲಿ ದೇಶವಿದೇಶಗಳಿಂದ ನಿಮ್ಮ